ರಾಜ್ಯದಲ್ಲಿ ಪಿ.ಎಂ.ಆರ್.ವೈ ಕಾರ್ಯಕ್ರಮದ ಅನುಷ್ಠಾನ ಕುರಿತು

2028 (2622) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೇಂದ್ರ ಸರ್ಕಾರದ ಪಿ.ಎಂ.ಆರ್.ವೈ. ಕಾರ್ಯಕ್ರಮವನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆಯೇ;

(ಆ) ಹಾಗಿದ್ದಲ್ಲಿ ಈವರೆವಿಗೆ ಸ್ವಯಂ ಉದ್ಯೋಗ ಯೋಜನೆಯ ಮೂಲಕ ಈ ಸೌಲಭ್ಯವನ್ನು ಪಡೆದಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಪಿ.ಎಂ.ಆರ್.ವೈ. ಯೋಜನೆಯಡಿಯಲ್ಲಿ ಈವರೆವಿಗೆ ಎಷ್ಟು ಹಣವನ್ನು ಫಲಾನುಭವಿಗಳಿಗೆ ನೀಡಲಾಗಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

(ಅ) ಹೌದು.

(ಆ) 1993-94ರಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದ್ದು ಇಲ್ಲಿಂದ 1999-2000ರವರೆಗೆ ಒಟ್ಟು 78,051 ನಿರುದ್ಯೋಗಿಗಳು ಸೌಲಭ್ಯವನ್ನು ಪಡೆದಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

(ಇ) ಈ ಯೋಜನೆಯಡಿಯಲ್ಲಿ 1993-94ರಿಂದ 1999-2000 ಸಾಲಿನವರೆಗೆ ಒಟ್ಟು ರೂ. 41, 142.61 ಲಕ್ಷ ಸಾಲವನ್ನು ನೀಡಲಾಗಿದೆ.

ಅನುಬಂಧ

ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ 1993-94 ರಿಂದ 1999-2000ದ ಅಂತ್ಯದವರೆಗೆ ಸಾಲ ಪಡೆದ ನಿರುದ್ಯೋಗಿ ಫಲಾನುಭವಿಗಳ ಸಂಖ್ಯೆ ಕೆಳಕಂಡಂತೆ ಇದೆ:

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಫಲಾನುಭವಿಗಳ ಸಂಖ್ಯೆ
1.	ಬೆಂಗಳೂರು (ಗಾ)	2643
2.	ಬೆಂಗಳೂರು (ನಗರ)	7638
3.	ಬಾಗಲಕೋಟೆ (1998-99ರಿಂದ)	565
4.	ಬೆಳಗಾಂ	6411
5.	ಬಳ್ಳಾರಿ	3582
6.	ಬೀದರ್	2216
7.	ಬಿಜಾಪುರ	3572
8.	ಚಾಮರಾಜನಗರ (1998-99 ರಿಂದ)	317

1	2	3
9.	ಚಿಕ್ಕಮಗಳೂರು	1655
10.	ಚಿತ್ರದುರ್ಗ	3858
11.	ದಾವಣಗೆರೆ (1998-99 ರಿಂದ	737
12.	ದಕ್ಷಿಣ ಕನ್ನಡ	5356
13.	ಧಾರವಾಡ	5450
14.	ಗದಗ (1998-99 ರಿಂದ)	470
15.	ಗುಲ್ಬರ್ಗಾ	4036
16.	ಹಾಸನ	2807
17.	ಹಾವೇರಿ (1998-99 ರಿಂದ)	343
18.	ಕೊಡಗು	866
19.	ಕೋಲಾರ	3486
20.	ಕೊಪ್ಪಳ (1998-99 ರಿಂದ)	378
21.	ಮಂಡ್ಯ	2786
22.	ಮೈಸೂರು	5338
23.	ರಾಯಚೂರು	3082
24.	ಶಿವಮೊಗ್ಗ	3539
25.	ತುಮಕೂರು	3580
26.	ಉಡುಪಿ (1998-99 ರಿಂದ)	810
27.	ಉತ್ತರಕನ್ನಡ	2530
	ಒಟ್ಟು	78051

ಟಿ. ನರಸೀಪುರ ಕಪಿಲ ಮತ್ತು ಕಾವೇರಿ ನದಿಗಳಲ್ಲಿ ಅಕ್ರಮ ಮರಳು ಸಾಗಾಣಿಕೆ ಕುರಿತು

2030 (2439) : ಡಾ: ಭಾರತಿ ಶಂಕರ್ (ಟಿ. ನರಸೀಪುರ) : ಮಾನ್ಯ ಗಡಿ ಮತ್ತು ಭೂ ವಿಜ್ಞಾನ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಟಿ. ನರಸೀಪುರ ಕಪಿಲಾ ಮತ್ತು ಕಾವೇರಿ ನದಿಗಳಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಗಳ ಕೆಳಗೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವುದರಿಂದ ಸೇತುವೆಗಳಿಗೆ ತೊಂದರೆಯಾಗಿ ಶಿಥಿಲವಾಗುತ್ತಿರುವುದು ಮತ್ತು ಸುತ್ತಮುತ್ತಲಿನ ಸೌಂದರ್ಯಕ್ಕೆ ಧಕ್ಕೆ ಒದಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಅಕ್ರಮ ಮರಳು ಸಾಗಣೆ ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದೆಯೆ ಮತ್ತು ಎಂದು ಹೊರಡಿಸಿದೆ?